ಅಧ್ಯಕ್ಷರು: ನಿಯಮ 69ರ ಪ್ರಕಾರ ಮಹತ್ವದ ಜರೂರು ವಿಷಯದ ಬಗ್ಗೆ ಡಾ: ಕೆ. ಸುಧಾಕರ, ಎಸ್. ಎನ್. ನಾರಾಯಣಸ್ವಾಮಿ, ಎಸ್. ಎನ್. ಸುಬ್ಬಾರೆಡ್ಡಿಯವರು ಮಾತನಾಡಿ, ಸುಧಾಕರ್‌ರವರೇ 5 ನಿಮಿಷ ಮಾತನಾಡುತ್ತೀರಾ?

ಡಾ: ಕೆ. ಸುಧಾಕರ: ಮಂತ್ರಿಯವರು ಇಲ್ಲ ಅಧ್ಯಕ್ಷರೆ:

ಅಧ್ಯಕ್ಷರು: ಸರಿ ಹಾಗಾದರೆ ಸೋಮವಾರ ತೆಗೆದುಕೊಳ್ಳೋಣ. ಈಗ ಸಭೆಯು ಮುಕ್ತಯವಾಗಿ ಸೋಮವಾರ ಬೆಳಿಗ್ಗೆ 11–00 ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ 2 ಗಂಟೆ 48 ನಿಮಿಷಕ್ಕೆ ಮುಕ್ತಯಗೊಂಡು ಪುನಃ ದಿನಾಂಕ: 14ನೇ ಜುಲೈ 2014ರ ಸೋಮವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು)

ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ರಾಜೀವ ಗಾಂಧಿ ವಿದ್ಯುತ್ ಯೋಜನೆಯ ಗುತ್ತಿಗೆಯನ್ನು ಕಂಪನಿಗೆ ನೀಡಿರುವುದು.

8. ಅನುಬಂಧ–1

1841 (1508); ಶ್ರೀ ಅಪ್ಪಚ್ಚು ರಂಜನ್ ಎಂ. ಪಿ. (ಮಡಿಕೇರಿ)

ಅ) ರಾಜೀವಗಾಂಧಿ ವಿದ್ಯುತ್ ಯೋಜನೆಯ ಗುತ್ತಿಗೆಯನ್ನು ಕೊಡಗು ಜಿಲ್ಲೆಯಲ್ಲಿ ಯಾವ ಕಂಪನಿಗೆ ನೀಡಲಾಗಿದೆ.

ಆ) ಸದರಿ ಕಂಪನಿಯವರು ಜಿಲ್ಲೆಯಲ್ಲಿ ವಿದ್ಯುತ್ ಸಂಪರ್ಕ ನೀಡಲು ವಿಳಂಬ ಮಾಡಲು ಕಾರಣವೇನು;

ಇ) ಸದರಿ ಕಂಪನಿಗೆ ಕೊಡಗು ಜಿಲ್ಲೆಯಿಂದ ಎಷ್ಟು ಮೊತ್ತದ ಹಣ ನೀಡಲಾಗಿದೆ;

ಈ) ಕಾಮಗಾರಿ ಕೈಗೊಳ್ಳುವುದಕ್ಕೆ ಮೊದಲು ಹಣ ಪಾವತಿಸಲು ಕಾರಣವೇನು;

ಊ) ಕಾಮಗಾರಿಯ ಮೇಲ್ವಿಚಾರಣೆಯನ್ನು ಯಾರು ನೋಡಿಕೊಳ್ಳುತ್ತಿದ್ದಾರೆ.

ಋ) ಕೊಡಗು ಜಿಲ್ಲೆಯಲ್ಲಿ ಅಂದಾಜು 13.00 ಕೋಟಿ ಪಾವತಿಯಾಗಿರುವ ಬಗ್ಗೆ ಸಾರ್ವಜನಿಕವಾಗಿ ಕೇಳಿ ಬರುತ್ತಿದೆ, ಇದಕ್ಕೆ ಸರ್ಕಾರದ ಸಮಜಾಯಿಷಿ ಏನು?

ಶ್ರೀ ಡಿ. ಕೆ. ಶಿವಕುಮಾರ (ಇಂಧನ ಸಚಿವರು)

(ಅ) ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಕಾಮಗಾರಿಗಳನ್ನು ಕೊಡಗು ಜಿಲ್ಲೆಯಲ್ಲಿ ಮೆ॥ ದೀಪಕ ಕೇಬಲ್ಸ್ ಇಂಡಿಯ ಲಿಮಿಟೆಡ್, ಬೆಂಗಳೂರು ಇವರಿಗೆ ನೀಡಲಾಗಿದೆ.

(ಆ) ಕೊಡಗು ಜಿಲ್ಲೆಗೆ ಸಂಬಂಧಪಟ್ಟ ಆರ್.ಜಿ.ಜಿ.ವಿ.ವೈ. ಕಾಮಗಾರಿಯು ಈ ಕೆಳಕಂಡ ಕಾರಣಗಳಿಂದಾಗಿ ವಿಳಂಬ ಉಂಟಾಗಿರುತ್ತದೆ.

- ಕೊಡಗು ಜಿಲ್ಲೆ ಆರ್.ಜಿ.ಜಿ.ವಿ.ವೈ. ಕಾಮಗಾರಿಯನ್ನು ಆರ್. ಇ. ಸಿ. ಯವರು ದಿನಾಂಕ: 04.12.2006 ರಲ್ಲಿ ತಾತ್ವಿಕವಾಗಿ ಮಂಜೂರು ಮಾಡಿದ್ದರೂ ವಿಧಿಬದ್ಧವಾಗಿ ದಿನಾಂಕ: 07.08.2009 ರಂದು ಮಂಜೂರು ಮಾಡಿರುತ್ತಾರೆ.

- ಕೊಡಗು ಜಿಲ್ಲೆಯ ಪಶ್ಚಿಮ ಘಟ್ಟಗಳ, ಮಲೆನಾಡು ಪ್ರದೇಶಗಳ ಮತ್ತುದಟ್ಟ ಅರಣ್ಯದ ವ್ಯಾಪ್ತಿಗೆ ಬರುವುದರಿಂದ, ವರ್ಷದಲ್ಲಿ ಕೇವಲ 6 ರಿಂದ 7 ತಿಂಗಳು ಮಾತ್ರ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿದ್ದುದರಿಂದ ಹಾಗೂ ಈ ಗುಡ್ಡಗಾಡು ಪ್ರದೇಶದಲ್ಲಿ ಕೆಲಸದ ಸ್ಥಳಕ್ಕೆ ಸಾಮಗ್ರಿಗಳನ್ನು ಸಾಗಿಸುವುದು ಬಹಳಷ್ಟು ಕಷ್ಟವಾಗಿದ್ದರಿಂದ ಕಾಮಗಾರಿಯು ವಿಳಂಬವಾಗಿರುತ್ತದೆ.

- ವಿದ್ಯುತ್ ಲೈನುಗಳನ್ನು ಎಳೆಯಲು ಅರಣ್ಯ ಇಲಾಖೆಯಿಂದ ಅನುಮತಿ ದೊರೆಯುವುದು ವಿಳಂಬವಾಗಿದ್ದರಿಂದ ಮತ್ತು ಕೆಲವು ಕಡೆ ಲೈನುಗಳನ್ನು ಎಳೆಯಲು ಕಾಫಿತೋಟದ ಮಾಲೀಕರಿಂದ ಅಡ

ಚಣೆ ಉಂಟಾದ್ದರಿಂದ ಕೆಲಸ ನಿರ್ವಹಿಸುವುದು ವಿಳಂಬ ಉಂಟಾಗಿರುತ್ತದೆ.

ಇ) ಕೊಡಗು ಜಿಲ್ಲೆಯ ಆರ್. ಜಿ. ಜಿ. ವಿ. ವೈ. ಕಾಮಗಾರಿಗೆ ಸಂಬಂಧ ಪಟ್ಟಂತೆ ಗುತ್ತಿಗೆದಾರರಾದ ಮೆ॥ ದಿನೇಶ್ ಕೇಬಲ್ಸ್‌ರವರಿಗೆ ಅವಾರ್ಡ ಆದರೂ 60.14 ಕೋಟಿ ಯಲ್ಲಿ ಇದುವರೆಗೆ `35.26 ಕೋಟಿಗಳನ್ನು ಪಾವತಿಸಲಾಗಿರುತ್ತದೆ.

ಈ) ಆರ್. ಇ. ಸಿ. ಟೆಂಡರ್ ನಿಯಮಗಳ ಪ್ರಕಾರವಾಗಿ ಕಾಂಟ್ರಾಕ್ಟ್ ಅವಾರ್ಡನ ಸಾಮಗ್ರಿಗಳ ಮೊತ್ತದ ಮೇಲೆ ಶೇ. 15 ರಷ್ಟು ಹಾಗೂ ಕಾಮಗಾರಿ ನಿರ್ವಹಣಾ ವೆಚ್ಚದ ಮೇಲೆ ಶೇ. 10 ರಷ್ಟು ಮುಂಗಡ ಹಣ ಪಾವತಿಸಲು ಅವಕಾಶವಿರುತ್ತದೆ. ಇದರಂತೆ, ಮೆ॥ ದೀಪಕ್ ಕೇಬಲ್ಸ್ (ಇಂಡಿಯಾ) ಲಿಮಿಟೆಡ್, ಬೆಂಗಳೂರು ರವರಿಗೆ `8.00 ಕೋಟಿಗಳಷ್ಟು ಮುಂಗಡ ಹಣವಾಗಿ ಪಾವತಿಸಲಾಗಿರುತ್ತದೆ.

ಉ) ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಮಡಿಕೇರಿ ವಿಭಾಗಾಧಿಕಾರಿಗಳು ಕಾಮಗಾರಿಯ ಮೇಲ್ವಿಚಾರಣೆಯನ್ನು ಮಾಡಿರುತ್ತಾರೆ.

ಊ) ಈ ಯೋಜನೆಯಡಿಯಲ್ಲಿ ಕೊಡಗು ಜಿಲ್ಲೆಯಲ್ಲಿ 226 ಸಂಖ್ಯೆಯ ಗ್ರಾಮಗಳ ತೀವ್ರ ವಿದ್ಯುದೀಕರಣ ಹಾಗೂ 3 ಸಂಖ್ಯೆಯ ವಿದ್ಯುತ್ ಸಂಪರ್ಕವಿಲ್ಲದ ಗ್ರಾಮಗಳ ವಿದ್ಯುದೀಕರಣ ಮಾಡಲಾಗಿರುತ್ತದೆ. ಒಟ್ಟು 13477 ಬಿ.ಪಿ.ಎಲ್. ಮನೆಗಳಿಗೆ ಉಚಿತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಈ ಎಲ್ಲಾ ಕಾಮಗಾರಿಗಳಿಗೆ ಗುತ್ತಿಗೆದಾರರಿಗೆ ಒಟ್ಟು `35.26 ಕೋಟಿಗಳನ್ನು ಪಾವತಿಸಲಾಗಿರುತ್ತದೆ.